ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ

ದೂರವಾಣಿ ಸಂಖ್ಯೆ: 080 – 26422238, 26422245,
ಫ್ಯಾಕ್ಸ್: 26421299
ಇ–ಮೇಲ್: ddpiktbs@gmail.com

ನಂ.4, ಡಿಎಸ್‌ಇಆರ್‌ಟಿ ಕಟ್ಟಡ, 100 ಅಡಿ ವರ್ತುಲ ರಸ್ತೆ,
ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು–85
ವೆಬ್ ಸೈಟ್: www.ktbs.kar.nic.in

ಸಂಖ್ಯೆ: ಎ7/ಕ.ಪ.ಪು.ಸಂ.2018–19ರ ಪ.ಪು.ಬೇ.01/32/2017–18

ದಿನಾಂಕ: 07–10–2017

# ಸುತ್ತೋಲೆ

**ವಿಷಯ:** 2018–19ನೇ ಶೈಕ್ಷಣಿಕ ಸಾಲಿನ ಉಚಿತ ಮತ್ತು ಮಾರಾಟ ಪಠ್ಯಪುಸ್ತಕಗಳ ಬೇಡಿಕೆ ಪಡೆಯುವ ಬಗ್ಗೆ.

**ಉಲ್ಲೇಖ:**
1. ಈ ಕಚೇರಿ ಸುತ್ತೋಲೆ ಸಮಸಂಖ್ಯೆ, ದಿನಾಂಕ: 20–09–2017.
2. ಮಾನ್ಯ ಆಯುಕ್ತರು, ಸಾ.ಶಿ.ಇ, ರವರು ದಿನಾಂಕ: 04–10–2017 ರಂದು ಸೂಚಿಸಿದಂತೆ.

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಗಳ ಅನ್ವಯ, 2018–19ನೇ ಶೈಕ್ಷಣಿಕ ಸಾಲಿನ ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜಿನ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ. ಮಾನ್ಯ ಆಯುಕ್ತರು, ಸಾ.ಶಿ.ಇ ಇವರು 2018–19ನೇ ಶೈಕ್ಷಣಿಕ ಸಾಲಿಗೆ ಪಠ್ಯಪುಸ್ತಕಗಳ ಬೇಡಿಕೆಯನ್ನು SATS (Students Achievement Tracking System) ಆಧರಿಸಿ ಸಿದ್ಧಪಡಿಸಲು ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ 2018–19ನೇ ಸಾಲಿನ ಪಠ್ಯಪುಸ್ತಕಗಳ (ಉಚಿತ ಮತ್ತು ಮಾರಾಟ) ಮುದ್ರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಗಳ/ತಾಲ್ಲೂಕುಗಳ ಬೇಡಿಕೆಯನ್ನು SATS (Students Achievement Tracking System) ಆಧರಿಸಿ ಪಡೆಯಲಾಗುವುದು. **ಆದ್ದರಿಂದ ಜಿಲ್ಲೆಗಳಲ್ಲಿ/ತಾಲ್ಲೂಕುಗಳಲ್ಲಿ ಯಾವುದೇ ಸರ್ಕಾರಿ, ಅನುದಾನಿತ, ಅನುದಾನರಹಿತ ಮತ್ತು ಇತರೆ ಇಲಾಖೆಗಳಿಂದ ನಡೆಯುವ ಶಾಲೆಗಳಿಂದ ಬೇಡಿಕೆಯನ್ನು ಪಡೆಯುವ ಅವಶ್ಯಕತೆ ಇಲ್ಲ.**

2018–19ನೇ ಶೈಕ್ಷಣಿಕ ಸಾಲಿಗೆ SATS ಆಧರಿಸಿ ಸಿದ್ಧಗೊಳಿಸಿದ ಬೇಡಿಕೆ ಅನ್ವಯ ಮುದ್ರಣಗೊಂಡು ಸರಬರಾಜು ಆಗುವ ಎಲ್ಲಾ ತರಗತಿಗಳ, ಭಾಷೆಗಳ, ಮಾಧ್ಯಮಗಳ ಉಚಿತ ಮತ್ತು ಮಾರಾಟ ಪಠ್ಯಪುಸ್ತಕಗಳನ್ನು ದಾಸ್ತಾನಿಗೆ ತೆಗೆದುಕೊಂಡು ನಿಗದಿತ ಸಮಯದೊಳಗೆ ಶಾಲೆಗಳಿಗೆ ವಿತರಿಸಲು ಕ್ರಮಕೈಗೊಳ್ಳುವುದು. ಪ್ರತಿ ವರ್ಷದಂತೆ ಪಠ್ಯಪುಸ್ತಕಗಳ ಸರಬರಾಜಿಗೆ ಪೂರಕವಾಗಿ ಸೂಕ್ತ ರೀತಿಯಿಂದ ಗೋದಾಮನ್ನು ಸಿದ್ಧಪಡಿಸಿಕೊಳ್ಳುವುದು.

2018–19ನೇ ಶೈಕ್ಷಣಿಕ ಸಾಲಿನ ಪಠ್ಯಪುಸ್ತಕಗಳ ಪೂರೈಕೆಗೆ ಪೂರಕ ಪ್ರಕ್ರಿಯೆಯಾದ **ಉಳಿಕೆ ಪಠ್ಯಪುಸ್ತಕಗಳ ಮಾಹಿತಿಯನ್ನು** ಈ ಸುತ್ತೋಲೆಯ ಅನುಬಂಧದಲ್ಲಿರುವ ನಮೂನೆಯಲ್ಲಿ ಹಾರ್ಡ್ ಮತ್ತು ಸಾಫ್ಟ್ ಪ್ರತಿಯಲ್ಲಿ ದೃಢೀಕರಣದೊಂದಿಗೆ ನೀಡಲು ಸೂಚಿಸಿದೆ. ಉಳಿಕೆ ಪಠ್ಯಪುಸ್ತಕಗಳನ್ನು ಪರಿಗಣಿಸುವಾಗ 2017–18ನೇ ಶೈಕ್ಷಣಿಕ ಸಾಲಿನ ಸರಬರಾಜಿನಲ್ಲಿ ಉಳಿಕೆ ಇರುವ ಪಠ್ಯಪುಸ್ತಕಗಳನ್ನು ಮಾತ್ರ ಪರಿಗಣಿಸಬೇಕು. ಆದರೆ 10ನೇ ತರಗತಿಗೆ 2018–19ನೇ ಶೈಕ್ಷಣಿಕ ಸಾಲಿಗೆ ವಿಜ್ಞಾನ ಮತ್ತು ಗಣಿತ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಎನ್.ಸಿ.ಇ.ಆರ್.ಟಿ ಪಠ್ಯಪುಸ್ತಕಗಳು ಮತ್ತು ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಪಠ್ಯಪುಸ್ತಕಗಳು ಜಾರಿಯಾಗುತ್ತಿರುವ ಕಾರಣ ಈ ಶೀರ್ಷಿಕೆಗಳಲ್ಲಿ ಉಳಿಕೆ ಇರುವ ಪಠ್ಯಪುಸ್ತಕಗಳನ್ನು ಪರಿಗಣಿಸುವಂತಿಲ್ಲ.

ಒಟ್ಟಾರೆಯಾಗಿ 2018–19ನೇ ಶೈಕ್ಷಣಿಕ ಸಾಲಿಗೆ ಪಠ್ಯಪುಸ್ತಕಗಳ ಬೇಡಿಕೆ, ಮುದ್ರಣ ಮತ್ತು ಸರಬರಾಜು SATS ಆಧಾರವಾಗಿರುತ್ತದೆ ಎಂದು ತಿಳಿಸಿದೆ.

- 2018–19ನೇ ಶೈಕ್ಷಣಿಕ ಸಾಲಿನ ಪಠ್ಯಪುಸ್ತಕಗಳ ಬೇಡಿಕೆಗೆ ಸಂಬಂಧಿಸಿದಂತೆ ದಿನಾಂಕ: 16–10–2017ರಂದು ಕರ್ನಾಟಕ ಪಠ್ಯಪುಸ್ತಕ ಸಂಘದಲ್ಲಿ ಆಯೋಜಿಸಿದ್ದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯನ್ನು ಮುಂದೂಡಲಾಗಿದೆ.

Narasimhaiah

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು.

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ
2. ಉಪನಿರ್ದೇಶಕರು, ಕ.ಪ.ಪು.ಸಂ., ಬೆಂಗಳೂರು ಇವರಿಗೆ ಸೂಕ್ತ ಅನುಪಾಲನೆಗಾಗಿ.
3. ಈ ಕಚೇರಿಯ ಎಲ್ಲಾ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
4. ಲೆಕ್ಕಶಾಖೆಗೆ ಮಾಹಿತಿಗಾಗಿ
5. ಕಚೇರಿ ಪ್ರತಿ.